## ಅಪಾರ್ಥ



ಬೇಸಿಗೆ ರಜೆಯ ಸಮಯ. ಮಾವಿನ ಹಣ್ಣಿನ ಕಾಲ. ಒಂದು ಸಂಜೆ ನನ್ನ ಮೂರು ವರ್ಷದ ಮೊಮ್ಮಗನ ಜೊತೆ ಪಕ್ಕದ ಮನೆಗೆ ಹೋಗಿದ್ದೆ. ಮಲೆನಾಡಿನ ಕಡೆಯ ಅವರು ನಮ್ಮಿಬ್ಬರಿಗೂ ತಿನ್ನಲು ರೊಟ್ಟಿ ಜೊತೆಗೆ ಕಾಡು ಮಾವಿನ ಹಣ್ಣಿನ ಗೊಜ್ಜು ಕೊಟ್ಟರು. ಆತ, 'ಕತ್ತೆ ಬೇಡಾ... ಬರೀ ರೋಸು ಸಾಕು' ಎಂದ. ಅವರು ಕೋಪ ಮಿಶ್ರಿತ ಬೇಸರದಿಂದ, 'ಏನೋ ಪುಟ್ಟಾ... ನನಗೆ ಕತ್ತೆ ಅಂತ ಬೈತಿಯಾ?' ಎಂದರು! ನನಗೆ ಪರಿಸ್ಥಿತಿಯ ಅರ್ಥವಾಗಿ, ಅವನ ಮಾತಿನ ಅರ್ಥ ತಿಳಿಸಬೇಕಾಯಿತು. ಅವನು ಮಾವಿನ ಗೊಜ್ಜಿಗೆ ಹಾಕಿದ ಓಟೆ ಬೇಡ... ಬರೀ ರಸ ಬೇಕು ಅನ್ನುವುದಕ್ಕೆ ಕೊಂಕಣಿ ಮಿಶ್ರಿತ ಕನ್ನಡದಲ್ಲಿ ಕತ್ತೆ (ಓಟೆ)ಬೇಡಾ... ಬರೀ ರೋಸು (ರಸ) ಸಾಕು ಎಂದು ಹೇಳಿದ್ದು... ವಿವರಿಸಿದಾಗ ನಗುವ ಸರದಿ ಅವರದಾಯಿತು

**ಜಯಮಾಲಾ ಎನ್. ಪೈ**

---



ಕಲೆ: ಗಣೇಶ ಆಚಾರ್ಯ

## ಪಿಯುಸಿ ಆಗಿಲ್ವಲ್ರೀ?

ಬೆಂಗಳೂರಿನ ಖಾಸಗಿ ಸಂಜೆ ಕಾಲೇಜಿನಲ್ಲಿ ಪದವಿ ಓದುತ್ತಿದ್ದೆ. ಅಂದು ಬೈಕಿನಲ್ಲಿ ಕಾಲೇಜಿಗೆ ಹೊರಟಾಗ ಪೊಲೀಸರು ವಾಹನ ದಾಖಲೆ ತಪಾಸಣೆಗೆ ಬೈಕ್ ನಿಲ್ಲಿಸಿದರು. 'ಕಾಲೇಜಿಗೆ ತಡವಾಗುತ್ತೆ ಸರ್, ಬಿಡಿ' ಎನ್ನುತ್ತಾ ನನ್ನ ವಾಹನದ ದಾಖಲೆ ತೋರಿಸಿದೆ. ಎಲ್ಲವನ್ನೂ ತಿರುವಿ, 'ನಿಮ್ದು PUC ಆಗಿಲ್ವಲ್ರೀ?' ಎಂದರು. 'PUC ಫಸ್ಟ್ ಕ್ಲಾಸಿನಲ್ಲಿ ಪಾಸ್ ಮಾಡಿದ್ದೀನಿ, ಸರ್. ಈಗ ಪದವಿ ಕಾಲೇಜಿಗೆ ಹೋಗ್ತಾ ಇದ್ದೀನಿ. ಬೇಕಾದ್ರೆ ನೋಡಿ' ಎಂದು ಕಾಲೇಜಿನ ಐ.ಡಿ ಕಾರ್ಡ್ ತೋರಿಸಿದೆ. ಅದಕ್ಕವರು ನಗುತ್ತಾ, 'ನಾನು ಕೇಳಿದ್ದು ಆ ಪಿಯುಸಿ ಅಲ್ಲ, PUC ಅಂದ್ರೆ Pollution Under Control ಸರ್ಟಿಫಿಕೇಟ್!' ಅಂದಾಗ ನಗು ತಡೆಯಲಾಗಲಿಲ್ಲ.

**ನಗರ ಗುರುದೇವ್ ಭಂಡಾರ್ಕರ್**